ಅನುಬಂಧ—ಆ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ವರ್ಷ ೧೯೮೬-೮೭	೧೯೮೭-೮೮	ಆಗಸ್ಟ್ ೧೯೮೮ ರವರೆಗೆ
೧	೨	೩	೪	೫
೧	ಬೆಂಗಳೂರು (ನಗರ)	೩,೭೩,೭೭೬	೪ ೩೪,೧೨೨	೪,೫೭,೪೧೪
೨.	ಬೆಂಗಳೂರು (ಗ್ರಾಮಾಂತರ)			
೩.	ಬೆಳಗಾಂ	೬,೧,೫೬೧	೬೯,೧ ೮	೭೨,೪೨೧
೪.	ಬಳ್ಳಾರಿ	೨೩,೩೯೮	೨೬,೪೪೫	೨೭,೮೯೦
೫.	ಬೀದರ್	೮ ೩೧೩	೯,೭೪೫	೧೦,೫೩೯
೬.	ಬಿಜಾಪುರ	೨೨,೭೧೪	೨೫.೯೭೦	೨೭.೩೩೨
೭.	ಚಿಕ್ಕಮಗಳೂರು	೧೩,೩೮೮	೧೫.೦೦೯	೧೫.೮೪೪
೮	ಚಿತ್ರದುರ್ಗ	೩೧.೨೧೪	೩೫,೫೭೯	೩೭.೩೧೬
೯.	ದಕ್ಷಿಣ ಕನ್ನಡ	೬೬,೦೮೩	೭೧.೮೩೯	೭೪,೨೨೦
೧೦.	ಧಾರವಾಡ	೪೬,೧೮೯	೬೨,೬೬೯	೬೭,೧೦೦
೧೧.	ಗುಲ್ಬರ್ಗ	೨೨,೭೮೮	೨೫.೮೮೪	೨೬ ೬೬೦
೧೨.	ಹಾಸನ	೧೮,೨೧೦	೨೦,೫೮೧	೨೧,೭೦೬
೧೩.	ಕೊಡಗು	೧೨.೨೮೦	೧೩,೪೫೫	೧೩,೭೭೯
೧೪.	ಕೋಲಾರ	೧೯,೫೨೨	೨೩,೫೦೨	೨೫.೧೫೧
೧೫.	ಮಂಡ್ಯ	೧೦,೯೭೯	೧೩,೨೬೩	೧೫,೯೨೫
೧೬.	ಮೈಸೂರು	೬೭,೮೧೧	೭೨,೬೬೭	೮೧,೬೨೫
೧೭.	ರಾಯಚೂರು	೧೯,೧೯೮	೨೧,೭೨೪	೨೨,೭೧೪
೧೮.	ಶಿವಮೊಗ್ಗ	೩೪,೨೮೩	೩೯ ೦೫೨	೪೦ ೪೯೧
೧೯.	ತುಮಕೂರು	೨೫,೫೦೩	೨೯,೪೬೬	೩೧,೩೪೫
೨೦.	ಉತ್ತರ ಕನ್ನಡ	೧೩,೬೪೫	೧೫,೯೮೩	೧೬,೭೭೦
	ಒಟ್ಟು	೪.೯೯.೭೭೫	೧೦,೩೧,೧೫೧	೧೧,೮೨,೯೯೨

ರೇಷ್ಮೆ ಬಿತ್ತನೆ ಮೊಟ್ಟೆ ಉತ್ಪಾದನೆ

೨೯೫೭ ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ರೇಷ್ಮೆ ಮತ್ತು ಪಶುಸಂಗೋಪನೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯದಲ್ಲಿ ಎಷ್ಟು ಎಕರೆ ಜಮೀನಿನಲ್ಲಿ ರೇಷ್ಮೆ ಬೆಳೆ ಇದೆ ಹಾಗೂ ರೇಷ್ಮೆ ಉತ್ಪಾದನೆ ಎಷ್ಟು ?

ಆ) ಕರ್ನಾಟಕದಲ್ಲಿ ರೇಷ್ಮೆ ಬೆಳೆಗೆ ಬೇಕಾಗುವ ಬಿತ್ತನೆ ಮೊಟ್ಟೆಯ ಪ್ರಮಾಣ ಎಷ್ಟು ?

ಇ) ಸರ್ಕಾರಿ ವಲಯದಲ್ಲಿನ ರೇಷ್ಮೆ ಉತ್ಪಾದನೆಯೆಷ್ಟು ? ಹಾಗೂ ಖಾಸಗಿ ವಲಯದಲ್ಲಿನ ಉತ್ಪಾದನೆ ಎಷ್ಟು ?

ಈ) ೧೯೮೮-೮೯ರಲ್ಲಿ ಸರ್ಕಾರವು ಎಷ್ಟು ಮಾರ್ಕೆಟಿಂಗ್ ಸೊಸೈಟಿಗಳನ್ನು ಸ್ಥಾಪಿಸಲು ಉದ್ದೇಶಿಸಿರುವರು.

ಊ) ೧೯೮೮-೮೯ರಲ್ಲಿ ಸರ್ಕಾರಕ್ಕೆ ಕಳಪೆ ರೋಗದ ಬಿತ್ತನೆ ಮೊಟ್ಟೆ ಸರಬರಾಜು ಮಾಡಿದ ಬಗ್ಗೆ ದೂರುಗಳು ಬಂದಿವೆಯೆ.

ಋ) ಸರ್ಕಾರ ರೋಗರಹಿತ ಬಿತ್ತನೆ ಮೊಟ್ಟೆ ಒದಗಿಸಲು ಕೈಗೊಂಡ ಕ್ರಮಗಳೇನು ?

ಶ್ರೀ ಕೃಷ್ಣ (ರೇಷ್ಮೆ ಮತ್ತು ಪಶುಸಂಗೋಪನಾ ಸಚಿವರು).—

ಅ) ಕರ್ನಾಟಕ ರಾಜ್ಯದಲ್ಲಿ ೩,೯೧,೧೦೦ ಎಕರೆ ಜಮೀನಿನಲ್ಲಿ ರೇಷ್ಮೆ ಬೆಳೆ ಇದೆ ಹಾಗೂ ರೇಷ್ಮೆ ಉತ್ಪಾದನೆ ಸುಮಾರು ೪೯೭೧ ಮೆಟ್ರಿಕ್ ಟನ್‌ಗಳು (೧೯೮೭-೮೮)

ಆ) ಸುಮಾರು ೨೦ ಕೋಟಿಗಳಷ್ಟು ಮೊಟ್ಟೆಯು ಒಂದು ವರ್ಷದಲ್ಲಿ ಬೇಕಾಗುವುದೆಂದು ಅಂದಾಜು ಮಾಡಲಾಗಿದೆ.

ಇ) ಒಂದು ವರ್ಷದಲ್ಲಿ ರೇಷ್ಮೆ ಉತ್ಪಾದನೆ.—

ಸರ್ಕಾರಿ ವಲಯದಲ್ಲಿ—೭೯ ಮೆ.ಟನ್‌ಗಳು

ಖಾಸಗಿ ವಲಯದಲ್ಲಿ —೪೮೯೧ ಮೆ.ಟನ್‌ಗಳು

ಈ) ಗ್ರೈನೇಜ್‌ಗಳನ್ನು ಸ್ಥಾಪಿಸುವ ಉದ್ದೇಶವಿರುವುದಿಲ್ಲ.

ಉ) ಬಂದಿರುವುದಿಲ್ಲ.

ಊ) ರೋಗರಹಿತ ಮೊಟ್ಟೆ ಒದಗಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

೧) ಬಿತ್ತನೆ ಪ್ರದೇಶಗಳಿಂದ ಉತ್ತಮ ಗುಣಮಟ್ಟದ ಬಿತ್ತನೆ ಗೂಡುಗಳನ್ನು ಬಿತ್ತನೆ ಕೋಠಿಗಳಿಗೆ ಒದಗಿಸುವುದು.

೨) ಬಿತ್ತನೆ ಕೋಠಿಗಳಲ್ಲಿ ಗಮನ ಕೊಟ್ಟು ಮೊಟ್ಟೆಗಳನ್ನು ತಯಾರಿಸುವುದು.

೩) ಪ್ರತಿ ಬಿತ್ತನೆ ಕೋಠಿಗಳಲ್ಲೂ ಚಿಟ್ಟೆಗಳನ್ನು ಬಹಳ ಎಚ್ಚರಿಕೆಯಿಂದ ಪರೀಕ್ಷೆ ಮಾಡಿ ಯಾವ ರೋಗವೂ ಕಾಣಿಸಿಕೊಳ್ಳದ ಮೊಟ್ಟೆಗಳನ್ನು ಮಾತ್ರ ವಿತರಣೆ ಮಾಡುವುದು.

೪) ಬಿತ್ತನೆ ಪ್ರದೇಶದಲ್ಲಿ ರೋಗಗಳು ಹರಡದಂತೆ ರೋಗ ನಿವಾರಣಾ ಕ್ರಮಗಳನ್ನು ತೆಗೆದುಕೊಳ್ಳುವುದು.

೫) ಖಾಸಗಿಯವರು ಮೊಟ್ಟೆ ತಯಾರಿಸಿ ವಿತರಣೆ ಮಾಡುವುದನ್ನು ಉಸ್ತುವಾರಿ ಮಾಡುವುದು

ಸಮಾಜ ಕಲ್ಯಾಣ ಹಾಗೂ ಇತರ ಇಲಾಖೆಗಳಲ್ಲಿ ಖರ್ಚಾದ ಹಣ

೨೮೬೩. ಶ್ರೀ ಜಿ. ಎಸ್. ಆಚಾರ್ (ಬೈಂದೂರು). —ಮಾನ್ಯ ಸಮಾಜ ಕಲ್ಯಾಣ, ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ (೧) ಸಮಾಜ ಕಲ್ಯಾಣ ಇಲಾಖೆ (೨) ಹಿಂದುಳಿದವರ ಕಲ್ಯಾಣ ಇಲಾಖೆ (೩) ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳ ಮೂಲಕ ೧೯೮೭-೮೮ನೇ ವರ್ಷದಲ್ಲಿ ವ್ಯಯಿಸಲು ಎಷ್ಟು ಹಣ ನಿಗದಿಗೊಳಿಸಲಾಗಿತ್ತು ಹಾಗೂ ಇದುವರೆವಿಗೂ ಆದ ವೆಚ್ಚವೆಷ್ಟು ?

ಆ) ಹಣ ಉಳಿಕೆಗೆ ಕಾರಣವೇನು ?

ಶ್ರೀ ಪಿ.ಜಿ ಆರ್. ಸಿಂಧ್ಯ (ಸಮಾಜ ಕಲ್ಯಾಣ ಸಚಿವರು).—

ಅ)(೧) ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಗೆ.

೧೯೮೭-೮೮ರಲ್ಲಿ ವ್ಯಯಿಸಲು ಹಣ ನಿಗದಿ ಗೊಳಿಸಿದ್ದು – ರೂ. ೨೫೫೫.೪೩ ಲಕ್ಷ
ಇದುವರೆವಿಗೂ ಆದ ವೆಚ್ಚ – ರೂ. ೨೩೬೨.೫೪ ಲಕ್ಷ
ಉಳಿಕೆ ಹಣ – ರೂ. ೧೯೨.೮೯ ಲಕ್ಷ